processing unit ಬಗ್ಗೆ ಯೋಜನೆಯನ್ನು ನಾವು ತೆಗೆದುಕೊಂಡಿಲ್ಲ. ಏಕೆಂದರೆ ಅಲ್ಲಿ ಸವದತ್ತಿ ಧಾರವಾಡ hardly 80–90 ಕಿ.ಮೀ. ಇರಬಹುದು. ಈಗ ಅದಕ್ಕೆ ಮತ್ತಷ್ಟು ಸಮಗ್ರವಾಗಿ ಈ ರೈತರ ಬೇಡಿಕೆ ಪ್ರಕಾರ ಸದ್ಯಕ್ಕೆ ಕೊಪ್ಪಳದಲ್ಲೊಂದು ನಿಗಮದಲ್ಲಿ mobile unit ಇದೆ. ಅದನ್ನು ಸವದತ್ತಿಗೆ shift ಮಾಡಿ ಕೆಲಸ ಕಾರ್ಯಗಳನ್ನು ಮಾಡುತ್ತೇವೆಂದು ಸದನದ ಮೂಲಕ ಅವರಿಗೆ ಹೇಳಲು ಬಯಸುತ್ತೇನೆ.

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ : ಧನ್ಯವಾದಗಳು. Processing Unitನ mobile unit ಅನ್ನು shift ಮಾಡಿಕೊಟ್ಟರೆ ಬಹಳಷ್ಟು ಅನುಕೂಲವಾಗುತ್ತದೆ. ದಯವಿಟ್ಟು ಅದನ್ನು ತೀವ್ರಗತಿಯಲ್ಲಿ ಮಾಡಿಕೊಡಬೇಕಾಗಿ ವಿನಂತಿ.

ಸೊರಬ ತಾಲ್ಲೂಕಿನಲ್ಲಿ ಹುದ್ದೆಗಳ ಭರ್ತಿ ಮತ್ತು ತೋಟಗಾರಿಕೆಯ ಚಟುವಟಿಕೆಗಳು

190 (539) ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೊರಬ ತಾಲ್ಲೂಕಿನಲ್ಲಿರುವ ತೋಟಗಾರಿಕೆ ಇಲಾಖೆಗೆ ಮಂಜೂರಾದ ಮತ್ತು ತುಂಬಲಾಗಿರುವ ಹುದ್ದೆಗಳೆಷ್ಟು; (ಹುದ್ದೆವಾರು ವಿವರ ನೀಡುವುದು)

ಆ) ಸದರಿ ತಾಲ್ಲೂಕಿನ ತೋಟಗಾರಿಕೆ ಇಲಾಖೆಯಿಂದ ಕೈಗೊಳ್ಳಲಾದ ಘಾರಂ ಚಟುವಟಿಕೆಗಳ ಹಾಗೂ ಅವುಗಳ ನಿರ್ವಹಣೆಯನ್ನು ಹೇಗೆ ಮಾಡಲಾಗುತ್ತಿದೆ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು) :

ಅ) ಸೊರಬ ತಾಲ್ಲೂಕಿನಲ್ಲಿರುವ ತೋಟಗಾರಿಕೆ ಇಲಾಖೆಗೆ 10 ಹುದ್ದೆಗಳು ಮಂಜೂರಾಗಿವೆ. ಅವುಗಳಲ್ಲಿ 5 ಹುದ್ದೆಗಳನ್ನು ತುಂಬಲಾಗಿದೆ. ಹುದ್ದೆವಾರು ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ. ಸಂ.	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ತುಂಬಲಾದ ಹುದ್ದೆಗಳ ಸಂಖ್ಯೆ
1.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	01	–
2.	ಸಹಾಯಕ ತೋಟಗಾರಿಕೆ ನಿರ್ದೇಶಕರು	01	–
3.	ಸಹಾಯಕ ತೋಟಗಾರಿಕೆ ಅಧಿಕಾರಿ	01	–
4.	ತೋಟಗಾರಿಕೆ ಸಹಾಯಕ	03	02
5.	ಪ್ರಥಮ ದರ್ಜೆ ಸಹಾಯಕರು	01	01
6.	ತೋಟಗಾರರು	03	03
	ಒಟ್ಟು	**10**	**05**

ಆ) ತೋಟಗಾರಿಕೆ ಇಲಾಖೆಯಿಂದ ಕೈಗೊಳ್ಳಲಾದ ಫಾರಂ ಚಟುವಟಿಕೆಗಳ ಹಾಗೂ ಅವುಗಳ ನಿರ್ವಹಣೆಯನ್ನು ಚೆನ್ನಾಗಿ ಮಾಡಲಾಗುತ್ತಿದೆ. ವಿವರಗಳು ಕೆಳಕಂಡಂತಿವೆ.

1. ಸೊರಬ ತಾಲ್ಲೂಕಿನ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಕೊಡಕಣಿ ತೋಟಗಾರಿಕೆ ಕ್ಷೇತ್ರವಿದ್ದು, ಇದರ ವಿಸ್ತೀರ್ಣ 87 ಎಕರೆಗಳಷ್ಟಿದೆ. ಇದರಲ್ಲಿ 67.00 ಎಕರೆಗಳಷ್ಟು ಪ್ರದೇಶವನ್ನು ವಿವಿಧ ಜಾತಿಯ ಪ್ರಧಾನ ಮತ್ತು ಅಪ್ರಧಾನ ಹಣ್ಣಿನ ಗಿಡಗಳನ್ನು ನೆಟ್ಟು ಅಭಿವೃದ್ಧಿಪಡಿಸಲಾಗಿದೆ.
2. ವಿವಿಧ ಜಾತಿಯ ಪ್ರಧಾನ ಮತ್ತು ಅಪ್ರಧಾನ ಹಣ್ಣಿನ ಸಸ್ಯೋತ್ಪಾದನೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಕಳೆದ ಸಾಲಿನಲ್ಲಿ 7000 ಸಂಖ್ಯೆಯ ಮಾವು, ಸಪೋಟ ಮತ್ತು ಹಲಸು ಕಸಿಗಿಡಗಳನ್ನು ಉತ್ಪಾದಿಸಲಾಗಿದೆ.
3. ಪ್ರಸಕ್ತ 2006–07ನೇ ಸಾಲಿನಲ್ಲೂ ಸಹ ವಿವಿಧ ಜಾತಿ ಗಿಡಗಳನ್ನು ಉತ್ಪಾದಿಸುವುದಲ್ಲದೇ, ಸಸ್ಯೋತ್ಪಾದನೆಗೆ ಅವಶ್ಯವಾದ ಪಾಲಿಹೌಸ್ ಹಾಗೂ ನೆರಳು ಚಪ್ಪರಗಳ ದುರಸ್ಥಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.
4. ಕ್ಷೇತ್ರದ ಆದಾಯ ಹೆಚ್ಚಿಸುವ ಸಲುವಾಗಿ ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಡಿ ಅನುಪಯುಕ್ತವಾದ ಗಿಡಗಳನ್ನು ತೆಗೆದು, ಹೆಚ್ಚು ಇಳುವರಿ ನೀಡುವ ವಿವಿಧ ಜಾತಿಯ ತಳಿಗಳ ಗಿಡಗಳನ್ನು ನೆಡಲು ಕ್ರಮ ಕೈಗೊಳ್ಳಲಾಗುತ್ತಿದೆ.
5. ಕ್ಷೇತ್ರದ ಗಿಡ/ಮರಗಳಿಗೆ ಸಾವಯವ ಗೊಬ್ಬರ/ ಎರೆಹುಳು ಗೊಬ್ಬರ ನೀಡಲು ಹಾಗೂ ಅಗತ್ಯವಾದ ಸಸ್ಯ ಸಂರಕ್ಷಣೆ ಕ್ರಮಗಳನ್ನು ಕೈಗೊಳ್ಳಲಾಗಿದೆ.
6. ಬೇಲಿ ನಿರ್ಮಾಣ, ಪಂಪ್‌ಹೌಸ್ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಈ ಇಲಾಖೆ ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ. ಮುಂಚಿನಿಂದಲೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರವಾಗಿ ಈಗ ನಾವು ನಮ್ಮ ತಾಲ್ಲೂಕಿನ ವಿಚಾರವಾಗಿ ಕೇಳಿದ್ದರೂ ಕೂಡ Horticulture Departmentನಲ್ಲಿ ಎಲ್ಲೆಲ್ಲಿ ನಾವು farms ಅನ್ನು ನಿರ್ವಹಣೆ ಮಾಡುತ್ತಿದ್ದೇವೆ, ಅಲ್ಲಿ ಒಂದು ಪೋಸ್ಟ್ ಕೂಡ ನಮಗೆ ಭರ್ತಿಯಾಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಈಗ ಸೊರಬ ತಾಲ್ಲೂಕಿನಲ್ಲಿ 87 ಎಕರೆ ತೋಟಗಾರಿಕೆ ಪ್ರದೇಶ ಇದೆ. ಒಬ್ಬ Group 'D' worker 87 ಎಕರೆಯನ್ನು farm house ಅನ್ನು green house ಎಲ್ಲದನ್ನೂ ಕೂಡ ನಿರ್ವಹಣೆ ಮಾಡಬೇಕು. ನಾವು trench ಹೊಡಿಸಿದ್ದೇವೆ. ಇದರ ಮಧ್ಯೆ ಏನಾಗಿದೆ ಎಂದರೆ, Group 'D'ಗೆ ಆ ಕಡೆಯಿಂದ ಎಲ್ಲಾ ರೈತರು ಒತ್ತುವರಿ ಮಾಡಿಕೊಂಡು ಬರುವುದು, ಗಲಾಟೆಯಾಗುವುದು ಮತ್ತೆ ನಾವು ಒತ್ತುವರಿ ತೆಗೆಸುವುದು. ಈ ತರಹದ ಪರಿಸ್ಥಿತಿ ಇದೆ. ಒಂದು ಹಿರಿಯ ನಿರ್ದೇಶಕರ ಹುದ್ದೆ ಖಾಲಿ ಇದೆ. ಸಹಾಯಕ ತೋಟಗಾರಿಕಾ ನಿರ್ದೇಶಕರ ಹುದ್ದೆ ಖಾಲಿ

ಇದೆ. ಸಹಾಯಕ ತೋಟಗಾರಿಕಾ ಅಧಿಕಾರಿಗಳ ಹುದ್ದೆ ಖಾಲಿ ಇವೆ. ತೋಟಗಾರಿಕಾ ಸಹಾಯಕರು deputation ಮೇಲೆ ಬಂದು ಬಿಟ್ಟು ಅವನೊಬ್ಬನೇ ಇದ್ದಾನೆ. ಶಿಕಾರಿಪುರದಿಂದ deputation ಇದ್ದಾನೆ. ಒಬ್ಬ Group 'D' worker ನಾವು ಪ್ರತಿ ಸಾರಿ KDP meeting ಮಾಡಿದಾಗ ಏನೂ ಮಾಡುವುದಿಲ್ಲ ಸಾರ್, ನಾವು watch and ward ಮಾಡುವುದಕ್ಕೆ ಹೋದರೆ ತೊಂದರೆ ಮಾಡುತ್ತಾರೆ ಎಂದು ಹೇಳುತ್ತಾರೆ. ಸಪೋಟಾ ಮರ ಇರಬಹುದು, ಮಾವಿನ ಮರ ಇರಬಹುದು, ತೆಂಗು ಇರಬಹುದು. ಇಲ್ಲಿ ಸಾಧನೆ ಏನೆಂದರೆ ಸುಮಾರು ಏಳು ಸಾವಿರ ಸಪೋಟಾ, ಮಾವು ಇವೆಲ್ಲಾ ಕಸಿ ಮಾಡುತ್ತೇವೆಂದು ಕಾಣುತ್ತದೆ. ಇದ್ಯಾವುದಕ್ಕೂ ಅಲ್ಲಿ ಕೆಲಸಗಳೇ ನಡೆಯದಂಥ ಪರಿಸ್ಥಿತಿ ಇದೆ. ದಯವಿಟ್ಟು, ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು, ಯಾರಾದರೊಬ್ಬ officer cadre ನವರನ್ನು ಅಲ್ಲಿಗೆ post ಮಾಡಿ. Atleast ಒಬ್ಬ officer ಅನ್ನಾದರೂ post ಮಾಡಿ. KDP ಯಲ್ಲಿ ಬಂದುಬಿಟ್ಟು reply ಮಾಡಿ, ಬಂದ ಹಣಕಾಸನ್ನು ಖರ್ಚು ಮಾಡಿ ಒಂದು ವರದಿ ಸಲ್ಲಿಸುವುದಕ್ಕೂ ಕೂಡ farm house ನಲ್ಲಿ ವ್ಯವಸ್ಥೆ ಇಲ್ಲ. ಹಾಗಾಗಿ, ದಯವಿಟ್ಟು, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಎಲ್ಲಿಂದಲಾದರೂ anywhere. Kindly post an officer. ಯಾವ್ಯಾವ ಹುದ್ದೆ ಖಾಲಿ ಇದೆಯೋ ಅವನ್ನೆಲ್ಲಾ ಭರ್ತಿ ಮಾಡಬೇಕು. ಅಲ್ಲಿಗೆ ಹಿರಿಯ ಸಹಾಯಕರು, ಸಹಾಯ ತೋಟಗಾರಿಕಾ ನಿರ್ದೇಶಕರಿದ್ದಾರೆ. ಒಬ್ಬೊಬ್ಬರನ್ನಾದರೂ fill up ಮಾಡಿದರೆ ನಮಗೆ ಬಹಳಷ್ಟು ಸಹಾಯವಾಗುತ್ತದೆ. ನಾವು ಆ ತೋಟವನ್ನು ತುಂಬಾ ಅಚ್ಚುಕಟ್ಟಾಗಿ ಮಾಡಿದ್ದೇವೆ. ಈ officerಗಳು ಇಲ್ಲವೆಂದು ಜನ ಒತ್ತುವರಿ ಮಾಡಿಕೊಂಡು ಆ ಕಡೆಯಿಂದ ಬರುವರು, ಮರವನ್ನು ಕಡಿದುಕೊಂಡು ಹೋಗುತ್ತಿದ್ದಾರೆ. ರಾತ್ರೋರಾತ್ರಿ ಇಲ್ಲಿ ಬೇಲಿ ಹಾಕಿದ್ದನ್ನೆಲ್ಲ ಕಿತ್ತು ಹಾಕಿದ್ದಾರೆ. ದಯಮಾಡಿ, ಇದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ತೋಟಗಳು ಅಧಿಕಾರಿಗಳ ಕೊರತೆಯಿಂದ ಸೊರಗಿಹೋಗಿವೆ. ಹಾಲಿ ಇರುವ ತೋಟಗಾರಿಕಾ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೂ ಈ ಬಗ್ಗೆ ವಿನಂತಿಯನ್ನು ಮಾಡಿಕೊಳ್ಳಲಾಗಿದೆ. ನಮಗೆ ಈ ವರ್ಷದಲ್ಲಿ ಅಧಿಕಾರಿಗಳನ್ನು ಕೊಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅದಾದನಂತರ, ತಕ್ಷಣ ಅಲ್ಲಿಗೆ ಅಧಿಕಾರಿಗಳನ್ನು ಹಾಕುವ ವ್ಯವಸ್ಥೆಯನ್ನು ಮಾಡುತ್ತೇವೆ.

SRI S. KUMARA BANGARAPPA : Recruitment process is a long process. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. ಕೃಷಿ ಇಲಾಖೆಯಲ್ಲಿ ಇದರ ಬಗ್ಗೆ ಮಾಹಿತಿ ಇರುವವರು ಕೆಲವರಿದ್ದಾರೆ. ಕೆಲವು ಅಧಿಕಾರಿಗಳಿದ್ದಾರೆ. ಅವರಿಗೆ ಸ್ವಲ್ಪ in charge ಆದರೂ ಕೊಡುವುದಕ್ಕೆ local ಆಗಿ directions ಕೊಡಿ. Atleast ಅವರನ್ನೇ ಇಟ್ಟುಕೊಂಡು farm house ಅನ್ನು ಸ್ವಲ್ಪ improvement ಆದರೂ ಮಾಡುತ್ತೇವೆ. ನೀವು

ದಯಮಾಡಿ ಇಲಾಖೆಗಳ ಮಧ್ಯೆ ಮಾತನಾಡಿಕೊಳ್ಳಿ. Agriculture Departmentನಲ್ಲಿ excess hands ಇದೆ. ಬೇರೆ ಕಡೆ ಎಲ್ಲೆಲ್ಲಿಗೋ deputation ತೆಗೆದುಕೊಂಡು ಹೋಗುತ್ತಾರೆ. ಪಶು ವೈದ್ಯಕೀಯ ಇಲಾಖೆ ಇರಬಹುದು, ಅಥವಾ ಎಲ್ಲೆಲ್ಲಿ ಬೇಕೋ ಅಲ್ಲಿಗೆ deputation ತೆಗೆದುಕೊಂಡು ಬಿಟ್ಟು ಅಲ್ಲಿ ಕೆಲಸ ಮಾಡಿ ಎಂದರೆ ಮಾಡುವುದಿಲ್ಲ. ಇಲ್ಲಿ ಕೆಲಸ ಮಾಡುವುದಕ್ಕೆ ರೆಡಿ ಇದ್ದಾರೆ. ಅದೇ ತಾಲ್ಲೂಕಿಗೆ ಅವರಿಗೆ charge ಕೊಡಿ. ನಮ್ಮ agriculture minister ಹತ್ತಿರ ಮಾತನಾಡಿ ತಾವು ಸ್ವಲ್ಪ ಕೃಷಿ ಇಲಾಖೆಯವರಿಗೆ charges ಕೊಟ್ಟರೂ we will maintain for the time being. ಕೆಲವು ಕೃಷಿ ಇಲಾಖೆಯ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡುತ್ತಾರೆ. ಅವರಿಗೆ ಸ್ವಲ್ಪ charge ಕೊಡುವುದಕ್ಕಾದರೂ ಅನುಮತಿ ಕೊಟ್ಟರೆ we will take the process. ಅಷ್ಟರಮಟ್ಟಿಗೆ ತಾವು ಸಹಾಯ ಮಾಡಿದರೂ ಕೂಡ ಆಗುತ್ತದೆ. ನೀವು ಆಟ್‌ಲೀಸ್ಟ್ ಎಲ್ಲಿಂದಲಾದರೂ deputation ಮಾಡಿಕೊಟ್ಟರೂ ಅದರಿಂದಲಾದರೂ ಸಹಾಯವಾಗುತ್ತದೆ.

ಶ್ರೀ ಸಿ.ಎಸ್. ಪುಟ್ಟೇಗೌಡ : 2 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ ಸಾರ್, ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ತಾಲ್ಲೂಕಿನಲ್ಲೂ ಆ ಸಮಸ್ಯೆ ಇದೆ.

ಅಧ್ಯಕ್ಷರು : ಏನಾಗಿದೆ ಎಂದರೆ ನಾನು ಬೇರೆ ಬೇರೆ ವಿಷಯ ಎಲ್ಲ ಎತ್ತಿಕೊಂಡರೆ ಪ್ರಶ್ನೋತ್ತರ ಮಣಿಸುವುದು ಕಷ್ಟವಾಗುತ್ತದೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಏಕೆಂದರೆ, ರೈತರಿಗೆ ತೋರಿಸುವುದಕ್ಕೋಸ್ಕರ ತೋಟಗಾರಿಕೆ ಇಲಾಖೆಯನ್ನು, ಕೃಷಿ ಇಲಾಖೆಯನ್ನು ನಾವು ಉಪಯೋಗಿಸಿಕೊಳ್ಳುತ್ತೇವೆ. ಏಕೆಂದರೆ ನಾವೆಲ್ಲ ಚುನಾವಣೆಯಲ್ಲಿ vote ಕೇಳುವುದಕ್ಕೆ ಹೋದಾಗ, ಭಾಷಣ ಮಾಡುವಾಗ ಅಲ್ಲಿಂದಲೇ ಶುರುವಾಗುವುದು. ಅದಕ್ಕೆ ಆ ಎರಡೂ ಇಲಾಖೆಗಳನ್ನು ಇಟ್ಟುಕೊಂಡಿದ್ದೇವೆ. ಈ ರಾಜ್ಯದಲ್ಲಿ ಇವತ್ತಲ್ಲ, ಬಹಳ ದಿವಸಗಳಿಂದ ತಬ್ಬಲಿ ಮಕ್ಕಳನ್ನು ನೋಡುವ ಹಾಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳನ್ನು ನಾವು ಇಟ್ಟುಕೊಂಡಿರುವುದು. ರೈತರು ಹೋದಾಗ "ನಿಮಗೋಸ್ಕರ ಈ ಇಲಾಖೆಯನ್ನು ಇಟ್ಟುಕೊಂಡಿದ್ದೇವೆ" ಎಂದು ತೋರಿಸುವುದಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಇನ್ನೊಂದು ಆ watershed ಎಂದು ಇದೆ. ಆ watershed charge ಕೊಡಿಸಲಿಲ್ಲವೆಂದು ನಮ್ಮೂರಲ್ಲೊಬ್ಬ ವಿಷ ತೆಗೆದುಕೊಂಡ. ಪಾಪ, ಆ ಇಲಾಖೆ ವ್ಯಾಪಾರಕ್ಕಾಗಿ ಇದೆ. ಇಂಥ ಇಲಾಖೆಯನ್ನೆಲ್ಲ merge ಮಾಡಿ ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳನ್ನು ಬಲಿಷ್ಠ ಮಾಡಿ. ಬೈರೇಗೌಡರ ಕಾಲದಲ್ಲಿ ಪಾಪ ಅವರು ಇನ್ನಿಲ್ಲದ ಕಾಳಜಿಯನ್ನು ತೋರಿಸಿದರು. ಆ watershed ಅನ್ನು ಏಕೆ separate ಆಗಿ ಇಟ್ಟುಕೊಂಡಿದ್ದೀರಿ? ಅವರೇನು ಇಂಜಿನಿಯರ್ರಾ? ಕೆರೆ ಕಟ್ಟುವುದಕ್ಕೆ, ದುಡ್ಡು ಹೊಡೆಯುವುದಕ್ಕೆ, ಯಾರ್ಯಾರಿಗೆ ಎಷ್ಟೆಷ್ಟು percent ಹೋಗುತ್ತದೆಂದು ದಯಮಾಡಿ ಅವರ ಆತ್ಮ ಮುಟ್ಟಿ ಹೇಳಲಿ. Watershedನಲ್ಲಿ ದುಡ್ಡು ತೆಗೆದುಕೊಳ್ಳದ ಪುಣ್ಯಾತ್ಮರು, ಆ ಇಲಾಖೆಯನ್ನು ನಡೆಸಿಕೊಂಡು ಬಂದಿರುವವರು ಯಾರ್ಯಾರು ಎಂದು ಹೇಳಿ. ದಯಮಾಡಿ,

ಇವನ್ನೆಲ್ಲ ಗಂಭೀರವಾಗಿ ಪರಿಗಣನೆ ಮಾಡಿ. ಮುಖ್ಯಮಂತ್ರಿಗಳಿದ್ದಾರೆ, ಕೃಷಿ ಸಚಿವರಿದ್ದಾರೆ. ತೋಟಗಾರಿಕಾ ಸಚಿವರಿದ್ದಾರೆ. ಈ ಮೂರೂ ಇಲಾಖೆಗಳನ್ನು ಸೇರಿಸಿ. ಬೇಕಾದರೆ ಆ watershed ಇಲಾಖೆಯನ್ನು ತೆಗೆದುಹಾಕಿ, ಎರಡು ಇಲಾಖೆಗಳನ್ನು ಬಲಿಷ್ಠ ಮಾಡಿ, ಏನೇ ಆಗಲಿ ಜನರಿಗೆ ಏನು ತಲುಪಬೇಕೋ ಅದು ನಿಜವಾಗಿ ತಲುಪುತ್ತಿಲ್ಲ. ಸುಮ್ಮನೆ ಅಲ್ಲಿ ತೋಟಗಳಿವೆ. ಅಲ್ಲಿ ನೋಡುವುದಕ್ಕೂ ಇಲ್ಲ. ಕುಮಾರ್ ಬಂಗಾರಪ್ಪನವರು ಹೇಳುವ ಹಾಗೆ ಎಂಥದ್ದೂ ಇಲ್ಲ. ಅಲ್ಲಿ ಕೇಳುವವರೂ ಇಲ್ಲ, ಹೇಳುವವರೂ ಇಲ್ಲ. ಇಲ್ಲ, ಮುಚ್ಚಿಬಿಡಿ. ರೈತರಿಗೆ "ನಮಗೇನೂ ಕೊಡುವುದಿಲ್ಲ, ಕೇವಲ excise ಇಲಾಖೆ, PWD ಇಂಥವನ್ನೆಲ್ಲ ಸರ್ಕಾರ ನಡೆಸುವುದಕ್ಕೆ ಇಟ್ಟುಕೊಂಡಿದ್ದಾರೆ" ಎಂದು ಸ್ಪಷ್ಟವಾಗಿ ಹೇಳಿ. ಅವರು ನೋಡಿಕೊಳ್ಳುತ್ತಾರೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ : ಕೃಷಿ ಸಚಿವರ ಜೊತೆಗೆ ಚರ್ಚಿಸಿ ಅಲ್ಲಿಗೆ ಅಧಿಕಾರಿಗಳನ್ನು ಹಾಕುವಂಥ ವ್ಯವಸ್ಥೆ ಮಾಡುತ್ತೇವೆ. ಏಕೆಂದರೆ, ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಮಾಹಿತಿಗಳೂ ಸಹ ಅಲ್ಲಿಯ ಅಧಿಕಾರಿಗಳಿಗಿರುತ್ತದೆ. ತಾವು ಹೇಳಿದಂಥ ಸಲಹೆ ನಿಜವಾಗಿ ಬಹಳ ಸೂಕ್ತವಾಗಿದೆ. ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ. ಈ ಇಲಾಖೆಗೆ ಕಳೆದ ವರ್ಷ 35 ಕೋಟಿ ರೂಪಾಯಿ ಮಾತ್ರ ಇತ್ತು. ಈ ಸಲ ನಮ್ಮ ಈ ಸಮ್ಮಿಶ್ರ ಸರ್ಕಾರ ಇನ್ನೂ 40 ಕೋಟಿ ರೂಪಾಯಿ ಜಾಸ್ತಿ ಕೊಡುವಂಥ ವಿಚಾರವನ್ನು ಹಾಕಿಕೊಂಡಿದೆ. ಆ ಹಿನ್ನೆಲೆಯೊಳಗೆ ಬರತಕ್ಕಂಥ ವರ್ಷದೊಳಗೆ ಎಲ್ಲಾ ತೋಟಗಾರಿಕೆಗೆ ಸಂಬಂಧಿಸಿದಂತೆ ನಮ್ಮ ವ್ಯಾಪ್ತಿಯಲ್ಲಿ ಏನು ಬರುತ್ತದೆ ಸರಿಯಾದಂಥ ವ್ಯವಸ್ಥೆ ಮಾಡಿದರೆ ಸಹ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಸಚಿವರೆ, ನಾವು ಈಗಾಗಲೇ 5 years action plan ಅನ್ನು farm houseಗೆ ಮಾಡಿಕೊಟ್ಟಿದ್ದೇವೆ. ಯಾರ್ಯಾರು ನಿಮಗೆ action plan ಅನ್ನು ಮಾಡಿಕೊಟ್ಟಿದ್ದಾರೆ, ಆ ಪ್ರಕಾರವಾಗಿ ಹಣಕಾಸು ಕೊಡಬೇಕು. Atleast ನಾವು boundaryಯನ್ನಾದರೂ ಕಾಪಾಡಿಕೊಳ್ಳುತ್ತೇವೆ. ಇಲ್ಲವೆಂದರೆ ಹುಲ್ಲು ಕುಯ್ಯುವುದಕ್ಕೆ ಜನ ಇಲ್ಲದಂಥ ಪರಿಸ್ಥಿತಿಯಲ್ಲಿದ್ದೇವೆ. ಹಾಗಾಗಿ, ದಯಮಾಡಿ ಹಣಕಾಸನ್ನೂ ಕೂಡ farmಗೆ release ಮಾಡಬೇಕು. ಮಾನ್ಯ ಕೃಷಿ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಾವು horticultureಗೆ ವಿನಂತಿ ಮಾಡಿಕೊಂಡಿದ್ದೇವೆ. ಅಲ್ಲಿ officers ಇಲ್ಲ. ನಿಮ್ಮ ಇಲಾಖೆಯಲ್ಲಿ ತಕ್ಕ ಮಟ್ಟಿಗೆ ಅಲ್ಲಿಯ officersಗೆ ಜ್ಞಾನವಿರುತ್ತದೆ. ಇಲ್ಲವೆಂದರೆ, Group 'D' ನೌಕರರನ್ನು ಇಟ್ಟುಕೊಂಡು ನಾವು farm house ಮಾಡಬೇಕಾಗುತ್ತದೆ. ಅದಕ್ಕೆ ತಾವು ಆ charge ಅನ್ನು ಕೊಟ್ಟರೆ ಸ್ವಲ್ಪ ನಮಗೆ ಅನುಕೂಲವಾಗುತ್ತದೆ. Same department concern ಅಲ್ಲದಿದ್ದರೂ ಕೂಡ ಯೋಚನೆಗಳಂತೂ ಒಂದೇ. ಗಿಡ ಬೆಳೆಸತಕ್ಕಂಥದ್ದು, ಔಷಧಿ ಹೊಡೆಯತಕ್ಕಂಥದ್ದು ಎಲ್ಲಾ ಒಂದೇ. ಏಕೆಂದರೆ, recruitment ಮಾಡದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಅಥವಾ ಇನ್ನು 6 ತಿಂಗಳು, 1 ವರ್ಷ ಬಿಟ್ಟುಕೊಂಡು ಮಾಡುವ ಹೊತ್ತಿಗೆ atleast ತಕ್ಕಮಟ್ಟಿಗೆ ನಮಗೊಂದು ಅಧಿಕಾರಿಯನ್ನಾದರೂ ಅಲ್ಲಿಗೆ ಕೊಡಬೇಕು.

ಶ್ರೀ ಅಲಂಗೂರು ಶ್ರೀನಿವಾಸ್ : ನಾನು clarification ಕೊಡುತ್ತೇನೆ. ತಾವು ಹೇಳಿದ ಹಾಗೆ, ಈಗಾಗಲೇ 125 ಜನರನ್ನು Horticultureನಿಂದ ಕೃಷಿ ಇಲಾಖೆಗೆ ತೆಗೆದುಕೊಂಡಿದ್ದಾರೆ. ನಾನು ಸಚಿವನಾಗಿದ್ದಾಗ ಹೋದ ವರ್ಷ ಪುನಃ ತೋಟಗಾರಿಕಾ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಹೇಳಿ ಆದೇಶವನ್ನೂ ಹೊರಡಿಸಿದ್ದೆ. ಆದರೆ, ಆಗಿನ ಮಾನ್ಯ ಮುಖ್ಯಮಂತ್ರಿಗಳು ಆ ಆದೇಶವನ್ನು ತಡೆಹಿಡಿದು ಕೇವಲ $^{1}/_{3}^{rd}$ ಅನ್ನು ಈ ಇಲಾಖೆಗೆ ನೇಮಕ ಮಾಡಬೇಕೆಂದು ಆದೇಶ ಹೊರಡಿಸಿದ್ದರು. ಈ ಸಾರಿ 175 ಜನ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಪುನಃ ನಮ್ಮ ಇಲಾಖೆಗೆ ವಾಪಸ್ಸು ತಂದರೆ 40 percent ಆದರೂ ಅದನ್ನು fulfil ಮಾಡಬಹುದು ಎಂದು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ : ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಅಲ್ಲ, ಅವರು ಮಂತ್ರಿಯಾದ ಮೇಲೆ ಹೇಳಿದ್ದರೆ ಚೆನ್ನಾಗಿತ್ತು. ಈಗ ಅಲ್ಲಿ ಪುಟ್ಟೇಗೌಡರು ಹೇಳುವುದಕ್ಕೆ ಉತ್ತರವಿತ್ತು. ಆದರೂ ನಾನು ಮಂತ್ರಿಯಲ್ಲ ಎಂದು ಕುಳಿತುಕೊಂಡೆ. ನೀವು ಮಂತ್ರಿಯೇ ಇಲ್ಲ ಏಕೆ ನೀವು ಉತ್ತರ ಹೇಳುತ್ತೀರಿ? ಸ್ವಲ್ಪ ಹೇಳಿ.

ಅಧ್ಯಕ್ಷರು : ಈಗ ಮಾವ ಬಾವಮೈದರು ಹೀಗೆ ಹೊಡೆದಾಡಿಕೊಂಡು ಕುಳಿತರೆ ಏನಪ್ಪ ಮಾಡುವುದು ನಾವು?

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಸಾರ್, ಈಗ ಮಂತ್ರಿ ಮಾಡಿ ಎಂದು ಹೇಳಿ.

ಅಧ್ಯಕ್ಷರು : ಆಯಿತು.

ಶ್ರೀ ಕೆ. ಶ್ರೀನಿವಾಸಗೌಡ : ನನಗೇನು ಸಂಬಂಧ? ಏನಿದ್ದರೂ ಶ್ರೀರಾಮರೆಡ್ಡಿಯವರು ಪೌರೋಹಿತ್ಯ ವಹಿಸುತ್ತಾರೆ.

ರಾಜೀವ್‌ಗಾಂಧಿ ಕುಡಿಯುವ ನೀರು ಪೂರೈಕೆಗೆ ತ್ವರಿತ ಮಂಜೂರಾತಿ

191 (621) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಕಿತ್ತೂರು ಹಾಗೂ ಇತರೆ 12 ಗ್ರಾಮಗಳ ಕುಡಿಯುವ ನೀರು ಪೂರೈಕೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು;

ಇ) ಸದರಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಯಾವಾಗ ನೀಡಲಾಗುವುದು;

ಈ) ತ್ವರಿತವಾಗಿ ಮಂಜೂರಾತಿ ನೀಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಸಕ್ಕರೆ ಸಚಿವರು) :

ಅ) ದಿನಾಂಕ: 29–12–2005 ರಂದು ನಡೆದ ರಾಜ್ಯ ಮಟ್ಟದ ಎಂಪವರ್ಡ್ ಸಮಿತಿ ಸಭೆಯಲ್ಲಿ ಕಿತ್ತೂರು ಮತ್ತು ಇತರೆ 12 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಸಬ್ ಮಿಷನ್ ಕಾರ್ಯಕ್ರಮದಡಿ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ.